# ಪ್ರಶ್ನೆ:

# “ದೇವರು ಕೃಪಾಳುವಾಗಿದ್ದರೆ, ಒಳ್ಳೆಯ ಪ್ರಾಮಾಣಿಕರಾದ, ಯಥಾರ್ಥರಾದ ಜನರು ನಾಶವಾಗುವ ಸಾಧ್ಯತೆ ಇರುವುದೋ?”

## ಉತ್ತರ:

ಜನರು ರಕ್ಷಿಸಲ್ಪಡುವ ಮೊದಲು ಪಾಪಗಳ ನಿವಾರಣೆಗಾಗಿ ನೀರಿನಲ್ಲಿ ಬಾಪ್ತಿಸ್ಮ ಹೊಂದತಕ್ಕದ್ದೆಂದು ಬೈಬಲ್ ಬೋಧಿಸುತ್ತದೆಂದು ನಾವು ನಂಬುತ್ತೇವೆ. ಹೀಗೆ ಹೇಳುವದರಿಂದ ಈ ಆಲೋಚನೆಗೆ ಜನರು ಪ್ರತಿಕ್ರಿಯೆ ತೋರಿಸುತ್ತಾರೆ, “ಹೌದು, ಬೈಬಲ್ ಅದನ್ನು ಬೋಧಿಸುತ್ತಿರುವಂತೆ ತೋರುತ್ತದೆ. ಆದರೆ ಬಾಪ್ತಿಸ್ಮ ಹೊಂದದೇ ಇರುವ ಎಲ್ಲಾ ಧಾರ್ಮಿಕ ಜನರ ಬಗ್ಗೆ ಏನು? ಅವರು ಒಳ್ಳೆಯವರೂ, ಯಥಾರ್ಥರೂ, ಪ್ರಾಮಾಣಿಕರೂ ಆಗಿರುವರು. ಅವರು ತಪ್ಪಿಹೋಗಿರುವ ಸಾಧ್ಯತೆ ಹೇಗಿದೆ?” ಮೊದಲನೆಯದು, ಕ್ರಿಸ್ತನಲ್ಲಿ ನಂಬಿಕೆಯಿಡುವ, ಒಳ್ಳೆಯವರಾದ, ಪ್ರಾಮಾಣಿಕರಾದ ಯಥಾರ್ಥರಾದ ಮತ್ತು ಧಾರ್ಮಿಕರಾದ ಜನರ ಬಗ್ಗೆ ಯೋಚಿಸುತ್ತಿರುವೆವು, ಆದರೆ ಅವರು ಪರಿಶುದ್ಧ ಬರಹಕ್ಕನುಗುಣವಾಗಿ ಎಂದೂ ಬಾಪ್ತಿಸ್ಮ ಹೊಂದಿರುವದಿಲ್ಲ. ಈ ಜನರು ತಪ್ಪಿಹೋಗಿರುವ ಸಾಧ್ಯತೆಯಿರುವುದೋ?

ನಮ್ಮ ಹುಡುಕುವಿಕೆಯ ವ್ಯಾಪ್ತಿಯನ್ನು ವಿಶಾಲಗೊಳಿಸೋಣ. ಅರಿಕೆ ಮಾಡುವ ಕ್ರೈಸ್ತರು ಮಾತ್ರವೇ ಒಳ್ಳೆಯವರೂ ಪ್ರಾಮಾಣಿಕರೂ ಮತ್ತು ಯಥಾರ್ಥರೂ ಆಗಿದ್ದಾರೆಂದು ತಿಳಿಯುವುದು ತಪ್ಪಾದದ್ದಾಗಿರುತ್ತದೆ. ಕೆಲವು ಜನರು ತಾವು ದೇವರಲ್ಲಿ ನಂಬಲಾರದೇ ಹೋಗುತ್ತಾರೆ. ಆ ತೀರ್ಮಾನದಲ್ಲಿ ಅವರು ಒಳ್ಳೆಯವರೂ ಪ್ರಾಮಾಣಿಕರೂ ಯಥಾರ್ಥರೂ ಆಗಿರುವರು. ಒಳ್ಳೆಯ, ಪ್ರಾಮಾಣಿಕ ಮತ್ತು ಯಥಾರ್ಥವಾದ ಜನರು ಹಾಗೆಯೇ ತಪ್ಪಿಹೋಗಬಹುದೋ?

ದೇವರಲ್ಲಿ ನಂಬಿಕೆಯನ್ನಿಟ್ಟು, ಆದರೆ ಕ್ರಿಸ್ತನನ್ನು ದೇವರ ಕುಮಾರನೆಂದು ಸ್ವೀಕರಿಸದೇ ಇರುವವರ ಬಗ್ಗೆ ಏನು? ದೇವರನ್ನು ಸ್ವೀಕರಿಸುವ ಆದರೆ ಕ್ರಿಸ್ತನನ್ನು ಆತನ ಕುಮಾರನೆಂದು, ದೇವರ ಅಂತಿಮ ಪ್ರಕಟನೆಯೆಂದು ಸ್ವೀಕರಿಸದ ಯೆಹೂದ್ಯರ ಇಲ್ಲವೇ ಮುಸ್ಲೀಮರ ಬಗ್ಗೆ ಏನು? ಅವರೂ ಸಹ, ಒಳ್ಳೆಯವರೂ, ಯಥಾರ್ಥರೂ, ಪ್ರಾಮಾಣಿಕರೂ - ಅರಿಕೆ ಮಾಡುವ ಕ್ರೈಸ್ತರಂತೆ ಒಳ್ಳೆಯವರೂ, ಯಥಾರ್ಥರೂ, ಪ್ರಾಮಾಣಿಕರೂ ಆಗಿದ್ದರೆ, ಅವರು ತಪ್ಪಿ ಹೋಗಬಹುದೋ?

## ಬೈಬಲ್ ಏನನ್ನು ಬೋಧಿಸುತ್ತದೆ?

ಅಂಥ ವಿಷಯದ ಮೇಲೆ ಬೈಬಲ್ ಏನನ್ನು ಬೋಧಿಸುತ್ತದೆ? ಎಂದು ಕೇಳು ವದರಿಂದ ಪ್ರಾರಂಭಿಸೋಣ. ದೇವರು ಏನು ಹೇಳುತ್ತಾನೆ ಎಂಬುದರ ಬಗ್ಗೆ ಅಕ್ಕರೆಯುಳ್ಳ ವರಾಗಿರುವೆವು ಆದರೆ ಅದರ ಬಗ್ಗೆ ಇತರರು ಏನು ನಂಬುತ್ತಾರೆ ಎಂಬುದರ ಬಗ್ಗೆ ಅಲ್ಲ. ದೇವರ ಚಿತ್ತವನ್ನು ನಾವು ತಿಳಿದುಕೊಳ್ಳುವದಕ್ಕೆ ಒಂದೇ ಒಂದು ಮಾರ್ಗವು ಆತನ ಪುಸ್ತಕವನ್ನು, ಅಂದರೆ ಬೈಬಲನ್ನು ಅಧ್ಯಯನ ಮಾಡುವುದು. ಹಾಗಾದರೆ ಬೈಬಲಿನ ಪ್ರಕಾರವಾಗಿ, ಈ ಜನರು ತಪ್ಪಿಹೋಗಬಹುದೋ?

ಆ ಪ್ರಶ್ನೆಗೆ ಉತ್ತರ ಕೊಡಲು, ಈ ಪ್ರಶ್ನೆಗಳನ್ನು ಕೇಳೋಣ:

ನಾಸ್ತಿಕನಿಗೆ, *"ದೇವರಲ್ಲಿ ನಂಬಿಕೆಯಿಲ್ಲದೆ ನೀನು ರಕ್ಷಿಸಲ್ಪಡಬಹುದೋ?"* ಎಂದು ಕೇಳೋಣ. "ದೇವರನ್ನು ಅರಿಯದವರ" ಮೇಲೆ ಕ್ರಿಸ್ತನು ಪ್ರತಿಕಾರವನ್ನು ಸಲ್ಲಿಸಲು ಉರಿಯುವ ಬೆಂಕಿನಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವನು ಎಂದು 2 ಥೆಸಲೊನೀಕ 1:7-9ರಲ್ಲಿ ಹೇಳಿದ್ದನ್ನು ಯೋಚಿಸಿರಿ. ನಂಬಿಕೆಯಿಲ್ಲದೇ ಒಬ್ಬನು ದೇವರನ್ನು ಮೆಚ್ಚಿಸಲಾರನು, ಯಾಕಂದರೆ ದೇವರ ಬಳಿಗೆ ಬರುವವನು "ದೇವರು ಇದ್ದಾನೆ" ಎಂದು ನಂಬತಕ್ಕದ್ದು ಎಂದು ಇಬ್ರಿಯ 11:6 ಹೇಳುತ್ತದೆ. ಇದು ಒಬ್ಬನು ನಾಸ್ತಿಕನಾಗಿದ್ದರೂ ಅವನು ರಕ್ಷಿಸಲ್ಪಡಬಹುದೆಂದು ಕೇಳಿಸುತ್ತದೆಯೋ? ಒಬ್ಬ ನಾಸ್ತಿಕನು ತಾನು ತಪ್ಪಾಗಿದ್ದರೆ ಮತ್ತು ಮರಣಾನಂತರ ನ್ಯಾಯತೀರ್ವಿಕೆಯಲ್ಲಿ ದೇವರನ್ನು ಎದುರಿಸಿದರೆ, ತಾನು ಕ್ಷಮೆ ಕೇಳುವೆನು ಮತ್ತು ಅವನು ಹಾಗೂ ದೇವರು ಈ ತಮಾಷೆಯ ಬಗ್ಗೆ ಚೆನ್ನಾಗಿ ನಗುವರು ಎಂದು ಹೇಳಿದನು. ಆದರೆ ಬೈಬಲಿನ ಪ್ರಕಾರವಾಗಿ, ಅದು ಈ ರೀತಿಯಲ್ಲಿ ಇರುವುದಿಲ್ಲ!

ಎರಡನೆಯದು, ಯಥಾರ್ಥವಾದ ಕ್ರೈಸ್ತೇತರರನ್ನು: *"ಕ್ರಿಸ್ತನಲ್ಲಿ ವಿಶ್ವಾಸವಿಲ್ಲದೇ ನೀವು ರಕ್ಷಿಸಲ್ಪಡಬಹುದೋ?"* ಎಂದು ಕೇಳೋಣ. ಬೈಬಲ್ ಏನನ್ನು ಬೋಧಿಸುತ್ತದೆ? ಯೋಹಾನ 8:24ರ ಪ್ರಕಾರವಾಗಿ, "ನನ್ನನ್ನು ಆತನೆಂದು ನಂಬದೇ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ" ಎಂದು ಯೇಸು ಹೇಳಿದನು. ಯೋಹಾನ 14:16ರಲ್ಲಿ, "… ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ" ಎಂದು ಆತನು ಹೇಳಿದನು. ಕ್ರಿಸ್ತನ ಹೆಸರಿನಿಂದಲೇ ಹೊರತು ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ (ಅಪೊಸ್ತಲರ ಕೃತ್ಯಗಳು 4:12). ಕ್ರೈಸ್ತನಲ್ಲದವನನ್ನು ನಾವು ಎಷ್ಟೋ ಮೆಚ್ಚಿಕೊಂಡರೂ, ನಾವು ಬೈಬಲ್ ಹೇಳುವದನ್ನು ಸ್ವೀಕರಿಸಿಕೊಂಡರೆ, ಅವನು ಅವಿಶ್ವಾಸಿಯಾಗಿಯೇ ಉಳಿದರೆ ಅವನು ರಕ್ಷಿಸಲ್ಪಡುವನೆಂದು ನಾವು ಯೋಚಿಸಲಿಕ್ಕಾಗದು.

ಮೂರನೆಯದಾಗಿ, ಧಾರ್ಮಿಕವಾಗಿ ತಪ್ಪಾಗಿರುವ ಅರಿಕೆ ಮಾಡುವ ಕ್ರೈಸ್ತರನ್ನ ಯೋಚಿಸಿರಿ. ಬಲಹೀನರು ತಪ್ಪು ಮಾಡುವವರೂ ಆದ ಕ್ರೈಸ್ತರ ಬಗ್ಗೆ ನಾವು ಮಾತಾಡುತ್ತಿರುವುದಿಲ್ಲ. ಕ್ರೈಸ್ತರೆಂದು ಹೇಳಿಕೊಳ್ಳವ ಆದರೆ ಪರಿಶುದ್ಧ ಬರಹಕ್ಕನುಗುಣ ವಾಗಿ ಬಾಪ್ತಿಸ್ಮ ಹೊಂದದೆ ಇರುವವರ ಬಗ್ಗೆ ಮಾತಾಡುತ್ತಿದ್ದೇವೆ. ಅವರು ರಕ್ಷಿಸಲ್ಪಡುವರೋ? *"ಸುವಾರ್ತೆಗೆ ವಿಧೇಯರಾಗದೇ ನೀವು ರಕ್ಷಿಸಲ್ಪಡಬಹುದೋ?"* ಎಂದು ಅವರನ್ನು ಕೇಳೋಣ. ಒಬ್ಬ ವ್ಯಕ್ತಿಯು ಸಭಾಪಂಗಡದ ಒಬ್ಬ ಸದಸ್ಯನಾಗಿರು ವನೆಂಬುದನ್ನು ಕಲ್ಪಿಸಿಕೊಳ್ಳಿರಿ. ಅವನು ತಾನು ನಂಬುವದರಲ್ಲಿ ಒಳ್ಳೆಯವನೂ, ಪ್ರಾಮಾಣಿಕನೂ ಹಾಗೂ ಯಥಾರ್ಥನೂ ಆಗಿದ್ದಾನೆ, ಆದರೆ ಅವನು ಎಂದೂ ಪರಿಶುದ್ಧ ಬರಹಕ್ಕನುಗುಣವಾಗಿ ಬಾಪ್ತಿಸ್ಮ ಹೊಂದಿರುವದಿಲ್ಲ. ಸುವಾರ್ತೆಯ ಈ ಆಜ್ಞೆಗೆ ವಿಧೇಯನಾಗದೇ ರಕ್ಷಿಸಲ್ಪಡಬಹುದೋ? 2 ಥೆಸಲೊನೀಕ 1:7-9ರಲ್ಲಿ, "ದೇವ ರನ್ನು ಅರಿಯದೇ ಇರುವವರ," ಮೇಲೆ ಕ್ರಿಸ್ತನು ಪ್ರತೀಕಾರ ತೆಗೆದುಕೊಳ್ಳುವನೆಂದು

ಪೌಲನು ಹೇಳಿದ್ದಲ್ಲದೇ, "ಸುವಾರ್ತೆಗೆ ವಿಧೇಯರಾಗದವರ ಮೇಲೆ" ಪ್ರತೀಕಾರ ತೆಗೆದುಕೊಳ್ಳುವನೆಂದು ಹೇಳಿದ್ದಾನೆ. ಯೇಸುವಿನ ಸುವಾರ್ತೆಗೆ ವಿಧೇಯನಾಗದೇ ಒಬ್ಬನು ರಕ್ಷಿಸಲ್ಪಡಲಾರನು (ಹೋಲಿಸು ಮತ್ತಾಯ 7:21-23). ಇದು ಬಹಳ ಕಠಿಣವಾದದ್ದೆಂದು ಯಾರಾದರೂ ಆಕ್ಷೇಪಿಸಿದರೆ, *ನಾವು* ನಿಯಮಗಳನ್ನು ಮಾಡಲಿಲ್ಲ; *ದೇವರು* ಮಾಡಿದ್ದಾನೆ! ಎಂದು ಉತ್ತರ ಕೊಡುತ್ತೇವೆ. ಆತನ ನಿಯಮಗಳಿಗೆ ವಿಧೇಯ ನಾಗಬಾರದೆಂದು ತೀರ್ಮಾನಿಸುವಲ್ಲಿ ಯಾವನಾದರೂ ಸುರಕ್ಷಿತನಾಗಿರುವನೋ ಎಂಬುದರ ಬಗ್ಗೆ ನಮಗೆ ಸಂಶಯವಿದೆ.

ಹಾಗಾದರೆ, ಒಳ್ಳೆಯ, ಪ್ರಮಾಣಿಕರಾದ ಮತ್ತು ಯಥಾರ್ಥದಿಂದ ಜನರು ನಿಜವಾ ಗಿಯೂ ತಪ್ಪಿಹೋಗುವ ಸಾಧ್ಯತೆ ಇದೇಯೇ? ಅದರ ಬಗ್ಗೆ ಯೋಚಿಸಿರಿ: ಕೊರ್ನೇಲ್ಯನು ಒಬ್ಬ ಒಳ್ಳೆಯ ಮನುಷ್ಯನಾಗಿದ್ದನು (ಅಪೊಸ್ತಲರ ಕೃತ್ಯಗಳು 10:1-4), ಆದರೆ ಅವನು ರಕ್ಷಿಸಲ್ಪಡಬೇಕಾದರೆ ವಾಕ್ಯಗಳನ್ನು ಕೇಳುವುದು ಅವನಿಗೆ ಅಗತ್ಯವಾದದ್ದರಿಂದ ಅವನು ತಪ್ಪಿಹೋಗಿದ್ದಾನೆಂದು ನಾವು ತಿಳಿದಿದ್ದೇವೆ (ಅಪೊಸ್ತಲರ ಕೃತ್ಯಗಳು 11:14, 15). ಐತಿಯೋಪ್ಯದವನು ಒಬ್ಬ ಧಾರ್ಮಿಕ ಮನುಷ್ಯನಾಗಿದ್ದನು. ಆದರೆ ಅವನಿಗೆ ರಕ್ಷಿಸಲ್ಪಡುವ ಅಗತ್ಯತೆಯಿತ್ತು, ಫಿಲಿಪ್ಪನು ಹೋಗಿ ಅವನಿಗೆ ಪ್ರಸಂಗಿಸುವಂತೆ ದೇವರು ಅವನನ್ನು ಕಳುಹಿಸಿದನು (ಅಪೊಸ್ತಲರ ಕೃತ್ಯಗಳು 8). ಸೌಲನು ಒಳ್ಳೆಯ ವನೂ ಪ್ರಾಮಾಣಿಕನೂ ಆಗಿದ್ದನು, ಆದರೆ ಒಬ್ಬ ಕ್ರೈಸ್ತನಾಗುವ ಮೊದಲು ತನ್ನನ್ನು ಪಾಪಿಗಳಲ್ಲಿ ಪ್ರಮುಖನೆಂದು ಯೋಚಿಸಿಕೊಂಡನು (1 ತಿಮೊಥೆ 1:15). ನೀವು ನೈತಿಕವಾಗಿ ಒಳ್ಳೆಯವರಾಗಿರಬಹುದು, ಆದರೆ ಯಥಾರ್ಥವಾಗಿ ತಪ್ಪಾಗಿರಬಹುದು; ಪ್ರಾಮಾಣಿಕರು, ಆದರೆ ಪ್ರಾಮಾಣಿಕವಾಗಿ ತಾಪ್ಪಾಗಿರಬಹುದು! ನಾವೆಲ್ಲರೂ ಇದರ ಉದಾಹರಣೆಗಳನ್ನು ನೋಡಿರುವೆವು. ಉದಾಹರಣೆಗಾಗಿ, ಆಸ್ಟ್ರೇಲಿಯಾದಲ್ಲಿ ಒಬ್ಬ ನರ್ಸ್ ಒಂದು ಆಸ್ಪತ್ರೆಯಲ್ಲಿ ನಾಲ್ಕು ಶಿಶುಗಳ ಮರಣದಲ್ಲಿ ಕೊಲೆಗಾರಳೆಂದು ಅಪರಾಧ ಹೊರಿಸಲ್ಪಟ್ಟಳು. ಔಷಧ ಸಿದ್ಧತೆಯು ಪ್ರಮಾಣದಲ್ಲಿ ಆಕೆ ಸಕ್ಕರೆಯ ಬದಲಾಗಿ ಉಪ್ಪನ್ನು ಹಾಕಿದ್ದಳು. ಆಕೆ ಮಾಡಿದ್ದಕ್ಕೆ ಸಾಕ್ಷಿಯ ಕೊರತೆಯಿದ್ದುದ್ದರಿಂದ ಆಕೆಗೆ ವಿರುದ್ಧವಾಗಿದ್ದ ವ್ಯಾಜ್ಯವು ತಿರಸ್ಕರಿಸಲ್ಪಟ್ಟಿತು. ಹಾಗಿದ್ದರೂ ಯಾರೋ ಒಬ್ಬರು ಸಕ್ಕರೆಯ ಬದಲಾಗಿ ಉಪ್ಪನ್ನು ಹಾಕಿದ್ದರು. ಆ ವ್ಯಕ್ತಿ ಅದನ್ನು ಮಾಡಿದಾಗ ಯಥಾರ್ಥವಾದ ತಪ್ಪನ್ನು ಮಾಡಿದ್ದಳು, ಆದರೆ ಪರಿಣಾಮವು ನಾಲ್ಕು ಮಕ್ಕಳ ಮರಣ.

ಕ್ಯಾನಡಾದ ಸಾಸ್ಕಾಟ್ಚೆವನ್, ರೆಗಿನಾದಲ್ಲಿಯ ಇಂಥದೇ ಘಟನೆಯಲ್ಲಿ, ಒಬ್ಬ ನರ್ಸ್ ಆಸ್ಪತ್ರೆಯಲ್ಲಿ ಶುದ್ಧ ನೀರಿನ ಬದಲಾಗಿ ಬೋರಿಕ್ ಆಸಿಡ್‌ನ್ನು ಕೂಡಿಸಿದಾಗ ಐದು ಶಿಶುಗಳು ಸತ್ತು ಹೋದವು. ಯಥಾರ್ಥವಾದ ತಪ್ಪು ದುಃಖಕರ ಘಟನೆಗೆ ನಡಿಸಿತು.

ಪ್ಯಾಸೆಂಜರ್ ಟ್ರೇನ್ ನ್ಯೂಯಾರ್ಕಿನೊಳಗೆ ವೇಗದಿಂದ ಬರುವ ಟ್ರೇನಿಗೆ ಡಿಕ್ಕಿ ಹೊಡೆದ, ಪರಿಣಾಮವಾಗಿ ಐವತ್ತು ಜನರು ಪ್ರಾಣ ಕಳೆದುಕೊಂಡರು. ಎಂಜಿನಿಯರನು ಮೂಗಿನಿಂದ ರಕ್ತಸುರಿಸುವದರೊಂದಿಗೆ ಮತ್ತು ಕಣ್ಣೀರು ಹರಿಯುವದರೊಂದಿಗೆ ತನ್ನ ಎಂಜಿನಿನ ಕೆಳಗೆ ಸಿಕ್ಕಿಕೊಂಡಿದ್ದನು. ಅವನು ಸಾಯುವ ನೋವಿನಲ್ಲಿ ಮುದುಡಿದ ಹಳದಿ ಪೇಪರನ್ನು ಮುಂದೆ ಹಿಡಿದು, "ತೆಗದುಕೋ," ಎಂದು ಹೇಳಿದನು. "ಯಾರೋ ಒಬ್ಬರು ನನಗೆ ತಪ್ಪಾದ ಅಪ್ಪಣೆಗಳನ್ನು ಕೊಟ್ಟರು ಎಂಬುದನ್ನು ಇದು ತೋರಿಸುತ್ತದೆ!" ಎಂದನು. ನಾವು ಯಥಾರ್ಥವಾಗಿ ತಪ್ಪಾದ ಅಪ್ಪಣೆಗಳನ್ನು ಅನುಸರಿಸಿದರೆ, ನಾವು ದುಃಖಕ್ಕೆ ಒಳಗಾಗುವೆವು - ಮತ್ತು ಇತರರು ನಮ್ಮೊಂದಿಗೆ ಹೋಗಬಹುದು.[1]

ಆದರೆ, ಒಳ್ಳೆಯ, ಪ್ರಾಮಾಣಿಕವಾದ ಮತ್ತು ಯಥಾರ್ಥವಾದ ಜನರು ತಪ್ಪಿಹೋದರೆ, ಅದು ಎರಡನೆಯ ಪ್ರಶ್ನೆಯನ್ನು ಎಬ್ಬಿಸುವುದು.

## ಅವರು ತಪ್ಪಿಹೋಗುವುದು ಹೇಗೆ ಸಾಧ್ಯವಾಗಿರುತ್ತದೆ?

ದೇವರು ಕೃಪಾಳುವಾಗಿದ್ದರೆ, ಅಂಥ ಜನರು ತಪ್ಪಿಸಿಕೊಂಡು ಹೋಗುವ ಸಾಧ್ಯತೆಯು ಹೇಗೆ ಇರುವುದು?

ಈ ಪ್ರಶ್ನೆಯನ್ನು ಚರ್ಚಿಸಲಿಕ್ಕೆ ನಾವು ಪ್ರಾರಂಭಿಸುವಂತೆ, ನಾವು ಇದನ್ನು ಹೇಳುವ ಅಗತ್ಯತೆಯಿದೆ: *ಬೈಬಲ್ ಯಾವುದೇ ಅರ್ಥದಲ್ಲಿ ಸತ್ಯವಾಗಿದ್ದರೆ, ತಪ್ಪಿಹೋದವರ ಹಾಗೂ ರಕ್ಷಿಸಲ್ಪಟ್ಟವರ ಮಧ್ಯದಲ್ಲಿ ಒಂದು ಗೆರೆಯು ಎಳೆಯಲ್ಪಡತಕ್ಕದ್ದು ಯಾಕಂದರೆ ಕೆಲವರು ತಪ್ಪಿಹೋಗುವರು.* ಈ ಹಂತದಲ್ಲಿ ನಾವು ನಮ್ಮ ತಲೆಗಳಿಂದ ಯೋಚಿಸತಕ್ಕದ್ದು ಆದರೆ ಹೃದಯಗಳಿಂದ ಅಲ್ಲ. ಕೆಲವರು ತಪ್ಪಿಹೋಗುವರು ಎಂದು ಬೈಬಲ್ ಬೋಧಿಸುತ್ತದೆ. ಕೆಲವರು ತಪ್ಪಿಹೋಗುವದರಿಂದ, ಬೈಬಲನ್ನು ನಂಬುವ ಪ್ರತಿಯೊಬ್ಬನು ಸಮಸ್ಯೆಯನ್ನು ಎದುರಿಸುವನು: ದೇವರು ಈ ಜನರನ್ನು ಯಾಕೆ ಖಂಡಿಸಬೇಕು? ಅವರು ಪೂರ್ಣವಾಗಿ ಸುವಾರ್ತೆಗೆ ವಿಧೇಯರಾಗದೇ ಇರುವ ಕಾರಣದಿಂದ ಒಳ್ಳೆಯವರು, ಪ್ರಾಮಾಣಿಕರು ಮತ್ತು ಯಥಾರ್ಥರೂ ಆದ ಅರಿಕೆ ಮಾಡುವ ಕ್ರೈಸ್ತರು ತಪ್ಪಿಹೋಗುವರು ಎಂದು ಹೇಳುವುದಕ್ಕೆ ಅನ್ವಯವಾಗುವ ಯಾವುದೇ ಆಕ್ಷೇಪಣೆಯು, ಅಷ್ಟೇ ಒತ್ತಡದಿಂದ ತಪ್ಪಿಹೋಗುವರೆಂದು ಯಾರಿಗಾದರೂ ಹೇಳಿದರೆ ಅವರಿಗೂ ಅನ್ವಯವಾಗುವುದು.

ತಪ್ಪಿಹೋದವರ ಮತ್ತು ರಕ್ಷಿಸಲ್ಪಟ್ಟವರ ಮಧ್ಯದಲ್ಲಿ ಬೇರ್ಪಡಿಸುವಿಕೆಯನ್ನು ಪ್ರತಿನಿಧೀಕರಿಸಲು ಒಂದು ಗೆರೆ ಎಳೆಯುವದನ್ನು ಕಲ್ಪಿಸಿರಿ. "ಬಾಪ್ತಿಸ್ಮ ಹೊಂದದ ವಿಶ್ವಾಸಿಗಳು" ಗೆರೆಯ "ತಪ್ಪಿಹೋದವರ" ಪಕ್ಕದಲ್ಲಿರುವ ರೀತಿಯಲ್ಲಿ ಗೆರೆಯನ್ನು ಇಡೋಣ. "ನೀನು ಹಾಗೆ ಮಾಡಲಾರಿ" ಎಂದು ಯಾರಾದರೂ ಹೇಳುತ್ತಾರೆ. ಯಾಕೆ ಮಾಡಬಾರದು? "ಯಾಕಂದರೆ ಆ ಬಾಪ್ತಿಸ್ಮ ಹೊಂದದ ವಿಶ್ವಾಸಿಗಳು ಒಳ್ಳೆಯವರೂ ಪ್ರಾಮಾಣಿಕರೂ ಮತ್ತು ಯಥಾರ್ಥ ಜನರಾಗಿದ್ದಾರೆ, ಮತ್ತು ದೇವರು ಒಳ್ಳೆಯ, ಪ್ರಾಮಾಣಿಕ ಮತ್ತು ಯಥಾರ್ಥ ಜನರನ್ನು ಖಂಡಿಸುವದಿಲ್ಲ." ಆಗ ನಾವು ಗೆರೆಯನ್ನು "ಬಾಪ್ತಿಸ್ಮ ಹೊಂದದ ವಿಶ್ವಾಸಿಗಳು" "ರಕ್ಷಿಸಲ್ಪಟ್ಟವರ" ಪಕ್ಕದಲ್ಲಿ ಬರುವಂತೆ ಬೆಳಿಸುವೆವು, ಆದರೆ "ಕ್ರೈಸ್ತರಲ್ಲದವರು" "ತಪ್ಪಿಹೋದವರು" ಪಕ್ಕದಲ್ಲಿದ್ದಾರೆ. "ಇಲ್ಲ, ಅದನ್ನು ಮಾಡಲಿಕ್ಕಾಗುವುದಿಲ್ಲ" ಎಂದು ಇನ್ನೊಬ್ಬನು ಆಕ್ಷೇಪಿಸುತ್ತಾನೆ. ಯಾಕೆ ಇಲ್ಲ? "ಯಾಕಂದರೆ ಆ ಜನರು ಒಳ್ಳೆಯವರೂ ಪ್ರಾಮಾಣಿಕರೂ ಯಥಾರ್ಥರೂ ಆಗಿರುತ್ತಾರೆ, ಮತ್ತು ದೇವರು ನಿಶ್ಚಯವಾಗಿಯೂ ಆತನಲ್ಲಿ ನಂಬಿಕೆಯಿಡುವ ಜನರನ್ನು ಖಂಡಿಸುವದಿಲ್ಲ, ಆದರೆ ಕ್ರಿಸ್ತನನ್ನು ಸ್ವೀಕರಿಸುವದಿಲ್ಲ." ಅನಂತರ, "ರಕ್ಷಿಸಲ್ಪಟ್ಟವರ" ಪಕ್ಕದಲ್ಲಿ "ಕ್ರೈಸ್ತರಲ್ಲದವರು" ಇರುವಂತೆ ನಾವು ಗೆರೆಯನ್ನು ಮುಂದುವರಿಸುತ್ತೇವೆ, ಆದರೆ "ನಾಸ್ತಿಕರು" ತಪ್ಪಿಹೋದವರ ಪಕ್ಕದಲ್ಲಿದ್ದಾರೆ. "ನಿಲ್ಲಿಸಿರಿ, ಅಲ್ಲಿ ನೀವು ಗೆರೆಯನ್ನು ಎಳೆಯಲಾರಿರಿ" ಎಂದು ಇನ್ನೊಬ್ಬನು ಒತ್ತಿ ಹೇಳುತ್ತಾನೆ. ಯಾಕೆ ಇಲ್ಲ? "ಯಾಕಂದರೆ ಕೆಲವು ನಾಸ್ತಿಕರು ಕ್ರೈಸ್ತರಂತೆ ನೈತಿಕವಾಗಿ ಒಳ್ಳೆಯವರಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಪರಲೋಕಕ್ಕೆ ಹೋಗಲು ನೀವು ಮಾಡಬೇಕಾದದ್ದು ಯಥಾರ್ಥವಾಗಿರುವಂಥದ್ದು ಮತ್ತು ಇತರ ಜನರನ್ನು ಸರಿಯಾಗಿ ನಡಿಸಿಕೊಳ್ಳುವುದು. ನಿಶ್ಚಯವಾಗಿ, ದೇವರು ಅದನ್ನು ಮಾಡುವ ಯಾರನ್ನಾದರೂ ಖಂಡಿಸುವದಿಲ್ಲ, ಆದರೆ, ಆತನಲ್ಲಿ ನಂಬಿಕೆಯಿಡದವರನ್ನು ಖಂಡಿಸುತ್ತಾನೆ. ನಿಶ್ಚಯವಾಗಿಯೂ ದೇವರು ಒಳ್ಳೆಯವರೂ, ಪ್ರಾಮಾಣಿಕರೂ ಯಥಾರ್ಥರೂ ಆಗಿರುವ ನಾಸ್ತಿಕರನ್ನೂ ಖಂಡಿಸುವದಿಲ್ಲ." ಆದುದರಿಂದ, ಪುನಃ ನಾವು "ರಕ್ಷಿಸಲ್ಪಟ್ಟವರ" ಪಕ್ಕದಲ್ಲಿ ನಾಸ್ತಿಕರನ್ನು ಒಳಗೊಳ್ಳುವಂತೆ ಗೆರೆಯನ್ನು ಚಲಿಸಬೇಕು.

"ತಪ್ಪಿಹೋದವರ" ಪಕ್ಕದಲ್ಲಿ ಈಗ ಇರುವವರು ಒಳ್ಳೆಯವರೂ ಪ್ರಾಮಾಣಿಕರೂ ಯಥಾರ್ಥರೂ ಆಗಿರದೇ ಇರುವದರಿಂದ ಕೊನೆಯದಾಗಿ ಇಲ್ಲಿ ನಾವು ಒಪ್ಪಂದವನ್ನು

ಕಂಡುಕೊಳ್ಳಲು ಶಕ್ತರಾಗಬಹುದು, ನಮ್ಮಲ್ಲಿ ಹೆಚ್ಚಾದವರು, "ಹೌದು, ಒಳ್ಳೆಯವರೂ ಪ್ರಾಮಾಣಿಕರೂ ಮತ್ತು ಯಥಾರ್ಥರೂ ಆಗಿರದೇ ಇರುವ ಅವಿಶ್ವಾಸಿಗಳನ್ನು ದೇವರು ಖಂಡಿಸಬಹುದು" ಎಂದು ಹೇಳಲು ಮನಸ್ಸುಳ್ಳವರಾಗಿದ್ದೇವೆ.

ಕೆಟ್ಟವರು, ಅಪ್ರಾಮಾಣಿಕರು ಮತ್ತು ಯಥಾರ್ಥರಲ್ಲದ ಜನರು ಶಿಕ್ಷಿಲ್ಪಡುವದರೊಂದಿಗೆ ನಮ್ಮ ಗೆರೆಯನ್ನು ಇಲ್ಲಿ ನಾವು ಬಿಡುವ ಮೊದಲು, ನಾವು ಪುನಃ ಆಕ್ಷೇಪಣೆಗಳನ್ನು ಕೇಳುತ್ತೇವೆ: "ಸತ್ಯ, ಅವರು ಒಳ್ಳೆಯವರಾಗಿರುವದಿಲ್ಲ, ಆದರೆ ಅವರು ಯಾಕೆ ಆಗಿರುವದಿಲ್ಲ?" ಎಂದು ಯಾರಾದರೂ ಕೇಳಬಹುದು. "ಅವರು ಮಾನಸಿಕವಾಗಿಯೂ ದೈಹಿಕವಾಗಿಯೂ ರೋಗಿಯಾಗಿರುವರು" ಎಂದು ಮನಃ ಶಾಸ್ತ್ರಜ್ಞ ಹೇಳುತ್ತಾನೆ. "ಅವರು ಶೈಕ್ಷಣಿಕವಾಗಿ ಅವಕಾಶ ಹೊಂದದವರಾಗಿದ್ದಾರೆ" ಎಂದು ಶಿಕ್ಷಕನು ಹೇಳುವನು. "ಅವರು ಸಾಮಾಜಿಕವಾಗಿ ಕೆಟ್ಟವರಾಗಿದ್ದಾರೆ" ಎಂದು ಸಮಾಜ ಶಾಸ್ತ್ರಜ್ಞನು ಹೇಳುವನು, "ಅವರ ಪರಿಸರವು ಅವರು ಇರುವಂಥ ರೀತಿಯಲ್ಲಿ ಮಾಡಿತು. ಅವರನ್ನು ನೀವು ದೂರಲಾರಿರಿ" ಎಂದು ಮನೋವಿಜ್ಞಾನಿ ಹೇಳುತ್ತಾನೆ. "ಅವರು ನರಕಕ್ಕೆ ಮೊದಲೇ ನೇಮಿಸಲ್ಪಟ್ಟಿದ್ದಾರೆ" ಎಂದು ಕಾಲ್ವಿನಿಸ್ಟ್ ಹೇಳುತ್ತಾನೆ. "ಅವರಿಗೆ ಸಂಡೇಸ್ಕೂಲಿಗೆ ಹೋಗುವ ಅವಕಾಶವಿರಲಿಲ್ಲ," "ಆದುದರಿಂದ ಅವರು ಹೆಚ್ಚು ಉತ್ತಮವಾಗಿ ತಿಳಿದಿರುವದಿಲ್ಲ" ಎಂದು ಸಭಾ ಸದಸ್ಯನು ಹೇಳುವನು. ಈ ಅನೇಕ ಹೇಳಿಕೆಗಳಲ್ಲಿ ಕೆಲವೊಂದು ಸತ್ಯವಿರುತ್ತದೆ. ಆದುದರಿಂದ ಪ್ರಶ್ನೆಯು ಇನ್ನೂ ನಮ್ಮೊಂದಿಗೆ ಇರುತ್ತದೆ: "ಅದು ಅವರ ತಪ್ಪಾಗಿರದೇ ಇರುವಾಗ, ಒಳ್ಳೆ ಯವರೂ ಪ್ರಾಮಾಣಿಕರೂ ಯಥಾರ್ಥರೂ ಆಗಿರದೇ ಇರುವವರನ್ನು ದೇವರು ಹೇಗೆ ಖಂಡಿಸುತ್ತಾನೆ?"

ಈ ಹಂತದಲ್ಲಿ, ನಮ್ಮ ಗೆರೆಯನ್ನು ಸಂಪೂರ್ಣವಾಗಿ ಎಸೆದು ಬಿಡಲು ಸಿದ್ಧ ರಾಗಿದ್ದೇವೆ! ಆದರೆ ನಾವು ಹಾಗೆ ಮಾಡಲಿಕ್ಕಾಗುವದಿಲ್ಲ! ನಾವು ಹಾಗೆ ಮಾಡಿದರೆ, ನಾವು ಬೈಬಲನ್ನು ಸಹ ಎಸೆದು ಬಿಡಬೇಕಾಗುತ್ತದೆ, ಯಾಕಂದರೆ ಕೆಲವರು ತಪ್ಪಿ ಹೋಗುವರು ಎಂದು ಅದು ಬೋಧಿಸುತ್ತದೆ!

ಹಾಗಾದರೆ ನಾವು ಗೆರೆಯನ್ನು ಎಲ್ಲಿ ಹಾಕಬೇಕು? ಅದು ಎಲ್ಲಿಯಾದರೂ ಹಾಕಲ್ಪಡತಕ್ಕದ್ದು! *ನಾವು ಎಲ್ಲೆಲ್ಲಿ ಗೆರೆ ಹಾಕುತ್ತಿದ್ದೇವೆಯೋ, ಒಳ್ಳೆಯವರಾಗಿರುವವರು, ಪ್ರಾಮಾಣಿಕರೂ ಮತ್ತು ಯಥಾರ್ಥರೂ ಇಲ್ಲವೇ ಅವರು ಹಾಗೆ ಇರದೇ ಇದ್ದದ್ದಕ್ಕಾಗಿ ಕ್ಷಮಿಸಲ್ಪಡಬೇಕಾದವರು ಗೆರೆಯ ತಪ್ಪಾದ ಬದಿಯಲ್ಲಿ ಇರುವವರು ಇರುತ್ತಾರೆ!*

ಒಳ್ಳೆಯವರು, ಪ್ರಾಮಾಣಿಕರೂ ಮತ್ತು ಭಿನ್ನವಾದ ಬೋಧನೆಯನ್ನು ನಂಬುವವರೂ ತಪ್ಪಿಹೋಗುವರೋ ಇಲ್ಲವೋ ಎಂಬ ಸಮಸ್ಯೆಯನ್ನು ಎದುರಿಸುವರು, ರಕ್ಷಣೆಗಾಗಿ ಬಾಪ್ತಿಸ್ಮವು ಅತ್ಯವಶ್ಯಕವಾಗಿದೆ ಎಂದು ಬೋಧಿಸುವ ನಾವಷ್ಟೆ ಅಲ್ಲ. ಒಬ್ಬ ಪ್ರಾಟೆಸ್ಟಾಂಟ್‌ನಿಂದ ಬರೆಯಲ್ಪಟ್ಟ "The One True Religion" ಎಂಬ ಲೇಖನವು ನನ್ನ ಫೈಲುಗಳಲ್ಲಿ ಇರುತ್ತದೆ. ನಿಜವಾಗಯೂ ಯಾವುದೇ ಅರಿಕೆ ಮಾಡುವ ಕ್ರೈಸ್ತನು ಅವನು ಹೇಳುವದರೊಂದಿಗೆ ಒಪ್ಪಿಕೊಳ್ಳತಕ್ಕದ್ದು; ಬೈಬಲಿನ ಪ್ರಕಾರವಾಗಿ, ಕ್ರೈಸ್ತತ್ವವು *ಒಂದು* ನಿಜವಾದ ಧರ್ಮವಾಗಿದೆ! ವಿಶಾಲವಾದ ಅರ್ಥದಲ್ಲಿ, ಕ್ರೈಸ್ತತ್ವವು ಜಗತ್ತಿನ ಜನಸಂಖ್ಯೆಯಲ್ಲಿ ಪ್ರತಿ ಶತ 30ರಷ್ಟು ಜನರಿಂದ ನಂಬಲ್ಪಟ್ಟಿರುತ್ತದೆ. ಅದರ ಅರ್ಥ ಜಗತ್ತಿನ ಜನಸಂಖ್ಯೆಯ ಉಳಿದ ಭಾಗ, ಪ್ರತಿ ಶತ 70 ಜನರ ಪೂರ್ಣಭಾಗವು ತಪ್ಪಿಹೋಗಿದೆ! "ಒಂದು ನಿಜವಾದ ಧರ್ಮವಾಗಿದೆ" ಎಂದು ಅವನು ಹೇಳಿದ್ದರ ಭಾಗವಾಗಿರದ, ಒಳ್ಳೆಯವರಾದ, ಪ್ರಾಮಾಣಿಕರಾದ ಮತ್ತು ಯಥಾರ್ಥದವರ ಬಗ್ಗೆ ನಾವು ಏನನ್ನು ನಂಬಬೇಕು?

ಕ್ರಿಸ್ತನ ಬಗ್ಗೆ ಇಲ್ಲವೇ ಬೈಬಲಿನ ಬಗ್ಗೆ ಯಾವುದನ್ನಾದರೂ ನಂಬುವ ಯಾರಿಂದಲೇ ಆಗಲಿ ಎದುರಿಸಲ್ಪಡುವ ಒಳ್ಳೆಯ ಪ್ರಾಮಾಣಿಕ ಮತ್ತು ಯಥಾರ್ಥವಾದ ಜನರು ತಪ್ಪಿ ಹೋಗುವ ಸಮಸ್ಯೆಯು ಜಾಗತಿಕವಾದದ್ದಾಗಿದೆ ಎಂಬುದನ್ನು ನಾವು ತೋರಿಸಿದ್ದೇವೆ. ಆದರೆ: "ಈ ಜನರನ್ನು ದೇವರು ಯಾಕೆ ಖಂಡಿಸುತ್ತಾನೆ?" ಎಂಬ ಪ್ರಶ್ನೆಗೆ ನಾವು ಇನ್ನೂ ಉತ್ತರ ಕೊಟ್ಟಿರುವುದಿಲ್ಲ.

ಆ ಪ್ರಶ್ನೆಗೆ ಉತ್ತರವು ಬೈಬಲಿನಲ್ಲಿ ಬೋಧಿಸಿದ ಮೂರು ಮಹಾ ಘಟನೆಗಳಲ್ಲಿ ಇರುತ್ತದೆ: ಮೊದಲನೆಯದು, ಎಲ್ಲರೂ ಪಾಪ ಮಾಡಿದ್ದಾರೆ (ರೋಮಾಪುರ 3:23). ಎರಡನೆಯದು, ಪಾಪಿಗಳು ಮರಣಕ್ಕೆ ಅರ್ಹರಾಗಿದ್ದಾರೆ. "ಪಾಪವು ಕೊಡುವ ಸಂಬಳ ಮರಣ ..." ಎಂದು ರೋಮಾಪುರ 6:23 ಹೇಳುತ್ತದೆ. "ಸಂಬಳ" ಎಂಬ ಪದವು ನೀನು ಅರ್ಹನಾಗಿರುವದರಿಂದ ಪಾಪದಿಂದ ನೀನು ಏನನ್ನಾದರೂ ಅಂದರೆ ಮರಣವನ್ನು ಹೊಂದಿಕೊಳ್ಳುವಿ ಎಂಬುದನ್ನು ಸೂಚಿಸುತ್ತದೆ. ನೀನು ಪಾಪ ಮಾಡಿದ್ದೀ, ಮತ್ತು ನಿನ್ನ ಪಾಪದ ಕಾರಣದಿಂದ ನೀನು ಸಾಯಲು ಅರ್ಹನಾಗಿದ್ದೀ. ಮೂರನೆಯದು, ಮನುಷ್ಯನು ತನ್ನನ್ನು ರಕ್ಷಿಸಿಕೊಳ್ಳಲಾರನು. ಪಾಪದಲ್ಲಿ, ನಾವು ಸಹಾಯ ಹೀನರಾಗುತ್ತೇವೆ, ಸಾಯಲು ದಂಡಿಸಲ್ಪಡುತ್ತೇವೆ. ನಾವು ಸಹಾಯ ಹೀನರು ಆಗಿದ್ದೇವೆ; ನಾವು ನಮ್ಮ ಪಾಪದಿಂದ ನಮ್ಮನ್ನು ಮೇಲಕ್ಕೆ ಎತ್ತಿಕೊಳ್ಳಲಾರೆವು. ಹೀಗೆ ನಾವು ಏನೂ ಇಲ್ಲದವರಾಗುತ್ತೇವೆ, ಮತ್ತು ಏನೂ ಮಾಡಲಾರದವರಾಗುತ್ತೇವೆ ಇದು ನಮ್ಮ ಪಾಪಗಳನ್ನು ತೆಗೆದು ಹಾಕಲಿಕ್ಕೆ ಸಾಕಾದಷ್ಟದ್ದಾಗುತ್ತದೆ.

ಅನೇಕರ ಸಮೆಸ್ಯಯು ಅವರ ಒಳ್ಳೆಯತನವು, ಪ್ರಾಮಾಣಿಕತೆಯು ಮತ್ತು ಯಥಾರ್ಥತೆಯು ಹೇಗೋ ಅವರ ಪಾಪಗಳಿಗಾಗಿ ಸರಿಪಡಿಸುವವು ಎಂದು ಅವರು ನಂಬುವಂಥದ್ದಾಗಿದೆ. ಅವರು ಪಾಪ ಮಾಡಿದ್ದೇವೆಂಬುದನ್ನು ತಿಳಿದಿರುವರು. ಆದರೆ ಅವರು ಒಳ್ಳೆಯವರಾಗಿದ್ದಾರೆ, ಪ್ರಾಮಾಣಿಕರಾಗಿದ್ದಾರೆ ಮತ್ತು ಸಾಕಷ್ಟು ಯಥಾರ್ಥರಾಗಿದ್ದಾರೆ, ಅವರ ಪಾಪಗಳು ಕ್ಷಮಿಸಲ್ಪಡುವವು ಮತ್ತು ದೇವರ ಮುಂದೆ ನೀತಿವಂತರಾಗಿ ನಿಂತುಕೊಳ್ಳುವೆವು ಎಂಬ ವಿಚಾರವುಳ್ಳವರಾಗಿದ್ದಾರೆ. *ಆದರೆ ಬೈಬಲ್ ಅದನ್ನು ಬೋಧಿಸುವದಿಲ್ಲ.* ಜಗತ್ತಿನಲ್ಲಿಯ ಎಲ್ಲಾ ಒಳ್ಳೆಯತನವೂ ಪ್ರಾಮಾಣಿಕತೆಯೂ ಮತ್ತು ಯಥಾರ್ಥತೆಯೂ ಒಂದು ಪಾಪವನ್ನು ತೆಗೆದು ಹಾಕುವದಿಲ್ಲ ಎಂಬುದನ್ನು ಅದು ಬೋಧಿಸುತ್ತದೆ!

"ಒಳ್ಳೆಯ, ಪ್ರಾಮಾಣಿಕ ಮತ್ತು ಯಾಥಾರ್ಥವಾದ ಜನರು ತಪ್ಪಿಸಿಕೊಂಡು ಹೋಗುವುದು ಹೇಗೆ?" ಮತ್ತು "ಅಂಥ ಜನರನ್ನು ದೇವರು ಯಾಕೆ - ಶಿಕ್ಷೆಗೆ ಗುರಿ ಮಾಡುತ್ತಾನೆ?" ಎಂಬ ಪ್ರಶ್ನೆಗಳಿಗೆ ನಮಗೆ ಉತ್ತರಗಳಿವೆ. ದೇವರು ಬಯಸುತ್ತಾನೆಂಬ ಕಾರಣಕ್ಕಾಗಿ ಅದು ಇರುವುದಿಲ್ಲ; ದೇವರು ಪ್ರೀತಿಸ್ವರೂಪನು ಮತ್ತು ಎಲ್ಲರೂ ರಕ್ಷಣೆ ಹೊಂದಬೇಕೆಂದು ಆತನು ಬಯಸುತ್ತಾನೆ. ಅದಕ್ಕೆ ಕಾರಣ ಅವರು ಪಾಪ ಮಾಡಿದ್ದಾರೆ; ಅವರು ದೇವರಿಗೆ ವಿರುದ್ಧವಾಗಿ ದಂಗೆಯೆದ್ದಿದ್ದಾರೆ. ಅವರು ತಮ್ಮ ಸ್ವಂತ ಒಳ್ಳೆಯತನದಲ್ಲಿ, ತಮ್ಮ ಪಾಪಗಳನ್ನು ತೆಗೆದು ಹಾಕಲು ಅವರು ಅರ್ಪಿಸುವಾಗ, ಅದು ಸಾಕಷ್ಟಾಗಿರುವದಿಲ್ಲ.

## ಹಾಗಾದರೆ ಯಾರು ರಕ್ಷಿಸಲ್ಪಡುವರು?

ಹಾಗಾದರೆ ಯಾರು ರಕ್ಷಿಸಲ್ಪಡುವರು? ಒಳ್ಳೆಯವನ, ಪ್ರಾಮಾಣಿಕತೆ ಮತ್ತು ಯಥಾರ್ಥತೆಗಳು ತಾವೇ ರಕ್ಷಣೆಯ ಭರವಸೆಗೆ ಸಾಕಾಷ್ಟಾಗದಿದ್ದರೆ, - ಒಳ್ಳೆ ಯವರೂ, ಪ್ರಾಮಾಣಿಕರೂ ಯಥಾರ್ಥರೂ ಆದ ಜನರು ತಪ್ಪಿಹೋದರೆ - ಯಾರು

ರಕ್ಷಿಸಲ್ಪಡುವರು? ಉತ್ತರವು ಸರಳವಾದದ್ದಾಗಿದೆ: ಈಗ ಮತ್ತು ನಿತ್ಯವಾಗಿ ರಕ್ಷಿಸಲ್ಪಡುವ ಕೇವಲ ಜನರು, ತಮ್ಮ ಸ್ವಂತ ಒಳ್ಳೆಯತನದ ಮೇಲೆ ಪ್ರಾಮಾಣಿಕತೆಯು ಮತ್ತು ಯಥಾರ್ಥತೆಯ ಮೇಲೆ ಅಲ್ಲ, ಆದರೆ ಕ್ರಿಸ್ತನ ರಕ್ತದ ಮೇಲೆ ಅವಲಂಭಿಸುವವರು - ರಕ್ತದಿಂದ ರಕ್ಷಿಸಲ್ಪಟ್ಟವರು ಆಗಿದ್ದಾರೆ!

ರಕ್ತವು ಮಾಡುವದರ ಬಗ್ಗೆ ಯೋಚಿಸಿರಿ: ಅದು *ಮನಸಾಕ್ಷಿಯನ್ನು* ಶುದ್ಧೀಕರಿಸುತ್ತದೆ: "... ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವ ಕ್ರರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ" (ಇಬ್ರಿಯ 9:14). ರಕ್ತವು ಮನುಷ್ಯನ ಪಾಪಗಳನ್ನು ಕ್ಷಮಿಸುವುದು. "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ" (ಮತ್ತಾಯ 26:28) ಎಂದು ಯೇಸು ಹೇಳಿದನು, ಅದು *ಪಾಪಗಳನ್ನು ತೊಳೆಯುವುದು.* ಪ್ರಕಟನೆ 1:5 ಹೀಗೆ ಹೇಳುತ್ತದೆ: "ನಮ್ಮನ್ನು ಪ್ರೀತಿಸುವವನೂ [ಕ್ರಿಸ್ತನು] ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ... ಆಗಿರುವಾತನಿಗೆ. ..."

ನಿಶ್ಚಯವಾಗಿಯೂ ಆತನ ರಕ್ತವು ನಮ್ಮನ್ನು ರಕ್ಷಿಸುತ್ತದೆ. ಖಂಡಿಸುವ, ಕೊಲ್ಲುವ ಮತ್ತು ನಮ್ಮನ್ನು ದೇವರಿಂದ ಬೇರ್ಪಡಿಸುವ ಪಾಪವನ್ನು ಅದು ಅಳಿಸಿ ಬಿಡುತ್ತದೆ. ಆದೆರೆ ಇದು ಹೇಗೆ ಸಂಭವಿಸುವುದು? ರಕ್ತದಿಂದ ಕ್ಷಮಾಣೆಯಾಗಲು ನಾವು ಏನು ಮಾಡತಕ್ಕದ್ದು?

*ಬಾಪ್ತಿಸ್ಮದಲ್ಲಿ* ರಕ್ತವು ನಮ್ಮ ಮನಸಾಕ್ಷಿಗಳನ್ನು ಶುದ್ಧೀಕರಿಸುತ್ತದೆ. 1 ಪೇತ್ರ 3:20, 21 ಹೀಗೆ ಹೇಳುತ್ತದೆ:

> ... ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ಧೀರ್ಘಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ ಬಳಿಗೆ ಹೋಗಿ ಸುವಾರ್ತೆಯನ್ನು ಸಾರಿದನು. ಆ ನಾವೆಯೊಳಗೆ ಕೆಲವರು ಅಂದರೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆ ಹೊಂದಿದರು. ಆ ನೀರಿಗೆ ಅನುರೂಪವಾದ ಬಾಪ್ತಿಸ್ಮವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ - ಅದು ಮೈಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ, ಒಳ್ಳೆ ಮನಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ.

ರಕ್ತವು *ಬಾಪ್ತಿಸ್ಮದಲ್ಲಿ* ಪಾಪವನ್ನು ಕ್ಷಮಿಸುತ್ತದೆ ಇಲ್ಲವೇ ತೆಗೆದು ಹಾಕುತ್ತದೆ. ಅಪೊಸ್ತಲರ ಕೃತ್ಯಗಳು 2:38ರಲ್ಲಿ ನಂಬುವ ಯೆಹೂದ್ಯರಿಗೆ ಹೀಗೆ ಹೇಳಲ್ಪಟ್ಟಿತು, "... ಮಾನಸಾಂತರಪಡಿರಿ, ಮತ್ತು ನಿಮ್ಮಲ್ಲಿ ಪ್ರತಿಯೊಬ್ಬರೂ ನಿಮ್ಮ *ಪಾಪಗಳ ಕ್ಷಮಾಣೆಗಾಗಿ* ಯೇಸುಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ; ಮತ್ತು ನೀವು ಪರಿಶುದ್ಧಾತ್ಮನ ವರವನ್ನು ಹೊಂದಿಕೊಳ್ಳುವಿರಿ" ಬಾಪ್ತಿಸ್ಮದಲ್ಲಿ ರಕ್ತವು ಪಾಪವನ್ನು ತೊಳೆಯುತ್ತದೆ. ಅಪೊಸ್ತಲರ ಕೃತ್ಯಗಳು 22:16ರಲ್ಲಿ, ಪಶ್ಚಾತ್ತಾಪ ಪಟ್ಟ ಸೌಲನಿಗೆ ಹೀಗೆ ಹೇಳಲ್ಪಟ್ಟಿತು; "ಈಗ ನೀನೇಕೆ ಸಾವಕಾಸ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ಬಾಪ್ತಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" ಬಾಪ್ತಿಸ್ಮವು ಆತನ ಸುರಿಸಲ್ಪಟ್ಟ ರಕ್ತದಿಂದ ರಕ್ಷಿಸಲ್ಪಡುವದಕ್ಕೆ ಹೇಗೆ ಸಂಬಂದಿಸಿದೆ ಎಂಬುದರ ಬಗ್ಗೆ ನಮಗೆ ಯಾವುದೇ ಪ್ರಶ್ನೆ ಇದ್ದರೆ, ಅದು ರೋಮಾಪುರ 6:3, 4ರಿಂದ ಉತ್ತರಿಸಲ್ಪಡುತ್ತದೆ: "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರೂ

ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂಬುದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡೆದುಕೊಳ್ಳಬೇಕು." ಕ್ರಿಸ್ತನ ಮರಣದಲ್ಲಿ ನಾವು ಬಾಪ್ತಿಸ್ಮ ಹೊಂದಿದ್ದೇವೆಂದು ಬೈಬಲ್ ಹೇಳುವಾಗ, ಬಾಪ್ತಿಸ್ಮದ ಮಹತ್ವದ ಬಗ್ಗೆ ಇರುವ ಯಾವುದೇ ಸಂಶಯವನ್ನು ಅದು ತೆಗೆದು ಹಾಕುತ್ತದೆ, ಯಾಕಂದರೆ ಯಾವಾಗಲೂ ಅದು ಆತನ ರಕ್ತದೊಂದಿಗೆ ಸಂಬಂಧಿಸಿ ಇರುತ್ತದೆ. ಹೀಗೆ ಒಳ್ಳೆಯತನ, ಪ್ರಾಮಾಣಿಕತೆ ಮತ್ತು ಯಥಾರ್ಥತೆಯೂ ನಿನ್ನನ್ನು ರಕ್ಷಿಸಲಾರದು; ಕ್ರಿಸ್ತನ ರಕ್ತವು ಮಾತ್ರವೇ ಅದನ್ನು ಮಾಡಬಲ್ಲದು, ಆದರೆ ರಕ್ತದಿಂದ ರಕ್ಷಿಸಲ್ಪಡಲು ನೀನು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದತಕ್ಕದ್ದು!

## ರಕ್ಷಣೆಯ ಬಗ್ಗೆ ನಾವು ಹೇಗೆ ನಿಶ್ಚಿತತೆಯುಳ್ಳವರಾಗಿರಬೇಕು?

ರಕ್ಷಣೆಯ ಬಗ್ಗೆ ನಾವು ಹೇಗೆ ನಿಶ್ಚಿತತೆಯುಳ್ಳವರಾಗಿರಬೇಕು? ಇತರರ ಬಗ್ಗೆ ದೇವರು ಹೇಗಾದರೂ ನಡೆಸಿಕೊಳ್ಳಲಿ, ನಮ್ಮಲ್ಲಿ ಪ್ರತಿಯೊಬ್ಬರು ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಸಂಪೂರ್ಣವಾಗಿ *ನಿಶ್ಚಿತತೆಯುಳ್ಳವರಾಗಿರುವೆವು?* ಉತ್ತರವು ಸ್ಪಷ್ಟವಾಗಿದೆ:

ಮೊದಲನೆಯದು, *ನಾವು ದೇವರ ವಾಕ್ಯವನ್ನು ಕೇಳಿಸಿಕೊಂಡಿರುವೆವೋ?* "ಆದುದರಿಂದ ವಿಶ್ವಾಸವು ಕೇಳಿಸಿಕೊಳ್ಳುವದರಿಂದ ಬರುತ್ತದೆ, ಕೇಳಿಸಿಕೊಳ್ಳು ವಿಕೆಯು ಕ್ರಿಸ್ತನ ವಾಕ್ಯದಿಂದ ಬರುತ್ತದೆ" (ರೋಮಾಪುರ 10:17). ಎರಡನೆಯದು, *ಯೇಸುವಿನಲ್ಲಿ ದೇವರ ಕುಮಾರನಂತೆ ನಾವು ನಂಬಿಕೆ ಇಟ್ಟಿದ್ದೇವೆಯೋ?* "... ನನ್ನನ್ನು ಆತನೆಂದು ನೀವು ನಂಬದೇ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ ..." (ಯೋಹಾನ 8:24). ಮೂರನೆಯದು, *ನಮ್ಮ ಪಾಪಗಳಿಗಾಗಿ ನಾವು ಮಾನಸಾಂತರ ಪಟ್ಟಿರುವೆವೋ?* "... ದೇವರ ಕಡೆಗೆ ತಿರಿಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೇಯೇ ಹಾಳಾಗಿ ಹೋಗುವಿರಿ" (ಲೂಕ 13:3). ನಾಲ್ಕನೆಯದು, *ಕ್ರಿಸ್ತನಲ್ಲಿ ನಮ್ಮ ವಿಶ್ವಾಸವನ್ನು ಅರಿಕೆ ಮಾಡಲಿಕ್ಕೆ ನಾವು ಮನಸುಳ್ಳವರಾಗಿರುವೆವೋ?* "ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ" (ರೋಮಾಪುರ 10:10). ಐದನೆಯದು, *ಪಾಪಗಳ ಪರಿಹಾರಕ್ಕಾಗಿ ಪರಿಶುದ್ಧ ಬರಹಕ್ಕನುಗುಣವಾಗಿ ಬಾಪ್ತಿಸ್ಮ ಹೊಂದಿರುವೆವೋ?* "... ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ; ಆಗ ನೀವು ಪರಿಶುದ್ಧಾತ್ಮನ ದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38).

ಹೊಸ ಒಡಂಬಡಿಕೆಯ ಕ್ರೈಸ್ತರಾಗಿರ್ರಿ. ಆತನ ಆಜ್ಞೆಗಳನ್ನು ನೀವು ಕೈಕೊಂಡು ನಡೆದರೆ, ನೀವು ನಿತ್ಯವಾಗಿ ದೇವರೊಂದಿಗೆ ಪರಲೋಕದಲ್ಲಿ ಇರುವ ಭರವಸೆಯು ಳ್ಳವರಾಗುವಿರಿ. ಆಗ, ಅತನು ಇತರರ ಬಗ್ಗೆ ಏನನ್ನೇ ಮಾಡಿದರೂ, ನೀವು ದೇವರ ಗೆರೆಯ ಬಲಗಡೆ ಇರುವದರ ಬಗ್ಗೆ ನಿಶ್ಚಿತತೆಯುಳ್ಳವರಾಗಿರುವಿರಿ!

## ಮುಕ್ತಾಯ

ಕೊನೆಯ ಒಂದು ಪ್ರಶ್ನೆಯನ್ನು ಕೇಳೋಣ: *ನೀನು ನಿಜವಾಗಿಯೂ ಒಳ್ಳೆಯವನೂ, ಪ್ರಾಮಾಣಿಕನೂ, ಯಥಾರ್ಥನೂ ಆಗಿರುವರೋ?*

ಕರ್ತನ ಆಜ್ಞೆಗಳಿಗೆ ಸಂಪೂರ್ಣವಾಗಿ ವಿಧೇಯರಾಗಿದ್ದಾರೆ ನೀನು ನಿಜವಾಗಿಯೂ "ಒಳ್ಳೆಯವನು" ಆಗಿರುವಿಯೋ?

ಸತ್ಯವೆಂದು ನೀನು ತಿಳಿಯುವಂಥದ್ದಕ್ಕೆ ವಿಧೇಯನಾಗದಿದ್ದರೆ ನೀನು ನಿಜವಾಗಿಯೂ "ಪ್ರಾಮಾಣಿಕನು" ಆಗಿರುವಿರೋ? "ಆದರೆ ಬೇರೆ ಯಾರೋ ಇದನ್ನು ನೋಡಲಿಲ್ಲ ಮತ್ತು ಅವನು ಅದಕ್ಕೆ ವಿಧೇಯನಾಗಲಿಲ್ಲ" ಎಂದು ನೀನು ಹೇಳಬಹುದು. ಬಹುಶಃ ಇರಲಿಕ್ಕಿಲ್ಲ, ಆದರೆ ನಿನಗಿದ್ದಂತ ಅವಕಾಶವು ಅವನಿಗೆ ಇದ್ದಿರಲಿಕ್ಕಿಲ್ಲ. ಆಗ ಅವನು ಪ್ರಾಮಾಣಿಕತೆಯಿಂದ "ನಾವು ಚೆನ್ನಾಗಿ ತಿಳಿದಿರಲಿಲ್ಲ" ಎಂದು ಹೇಳಬಹುದು. ನೀನು ಹೆಚ್ಚು ಚೆನ್ನಾಗಿ ಕಲಿತುಕೊಂಡಾಗ, ಚೆನ್ನಾಗಿ ತಿಳಿದುಕೊಂಡಾಗ ಅದನ್ನು ನೀನು ಹೇಳ ಬಹುದೋ? ನೀನು ತಿಳಿದಿರುವ ಸತ್ಯದ ಅಧಾರದ ಮೇಲೆ ಕಾರ್ಯ ಮಾಡುವದನ್ನು ನಿರಾಕರಿಸುವುದು ಅಪ್ರಾಮಾಣಿಕತೆಯಾಗಿರುವದಲ್ಲವೇ?

ಬೈಬಲಿನ ಕಡೆಗೆ ಗಮನ ಕೊಡಬಾರದೆಂದು ನೀನು ತೀರ್ಮಾನಿಸಿದಾಗ, ನೀನು ಎಂದೂ ಸತ್ಯವನ್ನು ಕೇಳದವನಂತೆ ನಿನ್ನ ಮಾರ್ಗದಲ್ಲಿಯೇ ಹೋಗಲು ನಿರ್ಣಯಿಸಿಕೊಂಡಾಗ, ನೀನು ನಿಜವಾಗಿಯೂ "ಯಥಾರ್ಥನೂ" ಆಗಿರುವಿಯೋ? ಹಾಗಿರುವಲ್ಲಿ, ದೇವರ ಚಿತ್ತವನ್ನು ತಿಳಿಯಲು ಬಯಸುವದರ ಬಗ್ಗೆ ಮತ್ತು ಆತನ ಚಿತ್ತಕ್ಕೆ ವಿಧೇಯನಾಗಲು ಬಯಸುವಲ್ಲಿ ನಿಜವಾಗಿಯೂ ಯಥಾರ್ಥನಾಗಿರುವಿಯೋ?

ಇತರರು ಒಳ್ಳೆಯವರೂ ಪ್ರಾಮಾಣಿಕರೂ ಮತ್ತು ಯಥಾರ್ಥರೂ ಆಗಿರಲಿ ಇಲ್ಲವೇ ಆಗಿರದೇ ಇರಲಿ, *ನೀನು* ಆಗಿದ್ದೀಯೋ?

---

ಟಿಪ್ಪಣಿ

[1]Taken from an article "selected and adapted" and published in the church bulletion of Siloam Springs, Arkansas.

© 2009 Truth for Today